# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ **177/2020**

ಸಿ.ಡಬ್ಲೂಃ 06 ಪಿಡಬ್ಲೂಃ 01

ಸಾಕ್ಷಿದಾರರ ಹೆಸರುಃ ಸುರೇಶ ತಂದೆಃ ಹನುಮಂತಪ್ಪ
ವಯಸ್ಸುಃ 34 ವರ್ಷ
ಉದ್ಯೋಗಃ ಕೂಲಿ
ಸಾಕೀನಃ ಹೊಳಲು.

ದಿಃ **18-11-2025** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

**01. ಆರೋಪಿತನ ಪರಿಚಯ ನನಗೆ ಇದೆ ಆತನು ನಮ್ಮ ಊರಿನವನು, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ, ಯಾವುದೇ ಸ್ವತ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ನೋಡಿ ಗುರುತಿಸಲಾಗಿರುವುದಿಲ್ಲ, ಸುಮಾರು 8 ವರ್ಷಗಳ ಹಿಂದೆ ನಾನು ಹಿರೇಹಡಗಲಿ ಗ್ರಾಮದ ಸಂತೆಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದಾಗ ಪೊಲೀಸರು ನನ್ನನ್ನು ಕರೆದು ಪೋಲಿಸರು 1 ಬಿಳಿ ಹಾಳೆಗೆ ಸಹಿ ಮಾಡು ಎಂದಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ, ಇದಲ್ಲದೆ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಗೆ ತನ್ನ ಸಹಿ ಇರುವ 2 ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳು ಪಂಚನಾಮೆ ಮತ್ತು ಕಚ್ಛಾ ನಕಾಶೆಗಳಾಗಿದ್ದು ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿ.ಪಿ.01 ಎಂದು ಕಚ್ಛಾ ನಕಾಶೆಯನ್ನು ನಿ.ಪಿ.02 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.01ಎ. ಮತ್ತು 02ಎ. ಎಂದು ಗುರುತಿಸಲಾಯಿತು. ನಿ.ಪಿ.01 ಮತ್ತು 02 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ.**

*(ಈ ಹಂತದಲ್ಲಿ ಸ.ಸ.ಅ.ರವರು ಮುಂದುವರೆಗದ ಮುಖ್ಯ ವಿಚಾರಣೆಗೆ ಸಮಯವಕಾಶ ಕೊರಿದ್ದು ಆಲಿಸಿ ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;

**02.** ದಿ.**07-04-2019** ರಂದು ಸಂಜೆ. **05.15** ಗಂಟೆಗೆ ನಾನು ಹೊಳಲು ಗ್ರಾಮದ ಗಾಂಧಿ ಬಜಾರ ಹತ್ತಿರ ಇದ್ದಾಗ ಹಿರೇಹಡಗಲಿ ಗ್ರಾಮದ ಪೊಲೀಸರಾದ ಚಾ.ಸಾ.**02** ರವರು ನನ್ನ ಬಳಿ ಬಂದು ಪಂಚರಾಗಿ ಬರಬೇಕೆಂದು ಗಾಂಧಿ ಸರ್ಕಲ ಹತ್ತಿರ ಇದ್ದ ಚಾ.ಸಾ.**01** ರವರ ಬಳಿ ಹೋಗಿ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಆಗ ಚಾ.ಸಾ.**01** ರವರು ನನಗೆ ಹೊಳಲು ಗ್ರಾಮದ **AK** ಕಲೋನಿ ರಸ್ತೇಯಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡಿದ್ದರಿಂದ ಅದಕ್ಕೆ ನಾನು ಒಪ್ಪಿದ್ದು, ಆಗ ನಾನು ಮತ್ತು ಚಾ.ಸಾ.**05** ಹಾಗೂ ಪೊಲೀಸ್ ಸಿಬ್ಬಂಧಿಗಳು ಚಾ.ಸಾ.**01** ರವರೊಂದಿಗೆ ಮೋಟರ ಸೈಕಲಗಳಲ್ಲಿ ಹೊಳಲು ಗ್ರಾಮದ **AK** ಕಾಲೋನಿ ಹತ್ತಿರ ಸಂಜೆ.**05.45** ಗಂಟೆಗೆ ಬೈಕಗಳನ್ನು ನಿಲ್ಲಿಸಿ ಮುಂದೆ ಹೋಗುವಷ್ಟರಲ್ಲಿ ಅಲ್ಲಿ ಸೇರಿದ್ದ ಜನರು ಪೊಲೀಸರನ್ನು ನೋಡಿ ಓಡಿ ಹೋಗಿದ್ದು ಮಧ್ಯ ಮಾರಾಟದಲ್ಲಿ ತೊಡಗಿದ್ದ ಒಬ್ಬ ವ್ಯಕ್ತಿಯು ಸಹ ಓಡಿ ಹೋಗಲು ಪ್ರಯತ್ನಿಸಿದ್ದು ಆಗ ಪೊಲೀಸರು ಆತನನ್ನು ಹಿಡಿಯಲು ಹಿಂಬಾಲಿಸಲಾಗಿ ಆತನು ಪರಾರಿಯಾಗಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾ.ಸಾ.**01** ಮತ್ತು ಪೊಲೀಸ್ ಸಿಬ್ಬಂಧಿಗಳು ಓಡಿ ಹೋದ ವ್ಯಕ್ತಿ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ್ ಚೀಲವನ್ನು ನನ್ನ ಮತ್ತು ಚಾ.ಸಾ.**05** ರವರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ **90** ಎಮ್.ಎಲ್.ನ ಹೈವೆ ಫೈನ ವಿಸ್ಕೀಯ **39** ಟೆಟ್ರಾಪ್ಯಾಕಗಳು ಮತ್ತು **315** ರೂಪಾಯಿ ನಗದು ಹಣ ಒಂದು ಕೈಚೀಲದಲ್ಲಿ ದೊರೆತಿರುತ್ತದೆ. ಸದರಿ ಮಧ್ಯದ ಪೌಚಗಳು ಮತ್ತು ಹಣವನ್ನು ಪೊಲೀಸರು ಅಮಾನತ್ತು ಪಡೆಸಿಕೊಂಡು ಸದರಿ ಸ್ಥಳದಲ್ಲಿ ಇದ್ದ ಲಕ್ಕನಗೌಡರು ಹನುಮಂತ ಎಂಬ ವ್ಯಕ್ತಿಗೆ ಅಕ್ರಮ ಮಧ್ಯ ಮಾರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಆತನ ಹೆಸರು ಜಗ್ಗಿನ ದೇವೆಂದ್ರಪ್ಪ ತಂದೆ ನಿಂಗಪ್ಪ ಸಾಃ ಹೊಳಲು ಗ್ರಾಮ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ಚಾ.ಸಾ.**1** ಮತ್ತು ಅವರ ಸಿಬ್ಬಂಧಿಗಳು ಸಂಜೆ.**05.45** ರಿಂದ

**06.30** ಗಂಟೆಯವರೆಗೆ ಸ್ಥಳದಲ್ಲಿಯೇ ನಿ.ಪಿ.**01** ರಂತೆ ಪಂಚನಾಮೆ ಜರೂಗಿಸಿ ದೊರೆತ ಮಧ್ಯದ ಪೌಚಗಳು ಮತ್ತು ಹಣವನ್ನು ಪ್ರತ್ಯೇಕ ಚೀಲದಲ್ಲಿ ಹಾಕಿ ಸೀಲು ಮಾಡಿ ಅಮಾನತ್ತು ಪಡೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿ.ಪಿ.**02** ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ನಿ.ಪಿ.**01** ಮತ್ತು **02** ಕ್ಕೆ ಸ್ಥಳದಲ್ಲಿಯೇ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿ ನಮ್ಮ ಊರಿನವನು ಆಗಿದ್ದರಿಂದ ಆತನಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

ನನ್ನ ಸಮಕ್ಷಮ

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.